ಶ್ರೀ. ಕೆ. ಜೆ. ಜಾರ್ಜ್.—ನಮ್ಮ ಸರ್ಕಾರ ಬಂದ ಮೇಲೆ ಇದನ್ನು ನಿಲ್ಲಿಸಿಲ್ಲ. ಅದನ್ನು ಜೂನ್ ೧೯೮೯ರಲ್ಲಿ ನಿಲ್ಲಿಸಿದ್ದಾರೆ. ನೀವೇ ಕೊಟ್ಟು ನೀವೇ ನಿಲ್ಲಿಸಿರಬಹುದೆಂದು ಕಾಣುತ್ತದೆ.

ಶ್ರೀ ಸಿ. ಬೈರೇಗೌಡ.—ಅಧಿಕಾರಿಗಳನ್ನು ಬದಲಾವಣೆ ಮಾಡಿದರೆ ಉತ್ತರ ಸಹ ಬದಲಾವಣೆ ಆಗುತ್ತದೆಯೇ ಎಂಬುದನ್ನು ದಯವಿಟ್ಟು ಯೋಚನೆ ಮಾಡುತ್ತೀರಾ?

ಬೆಂಗಳೂರು ನಗರದ ನಾಗರೀಕರಿಗೆ ಪಡಿತರ ಚೀಟಿಯನ್ನು ನೀಡಲು ಏಕ ಪಂಖಿ ಪದ್ಧತಿ

೬೫೬ ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) ಮಾನ್ಯ ಆಹಾರ ಮಂತ್ರಿ ನಾಗರೀಕ ಸರಬರಾಜು ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ರೇಷನ್ ಕಾರ್ಡ್‌ಗಳನ್ನು ಸಾರ್ವಜನಿಕರಿಗೆ ಶೀಘ್ರವಾಗಿ ಕೊಡುವುದಕ್ಕಾಗಿ ಸಿಂಗಲ್ ವಿಂಡೋ ಪದ್ಧತಿಯನ್ನು ಜಾರಿಗೆ ತರಲಾಗುವುದೇ?

ಆ) ಇಲ್ಲದಿದ್ದಲ್ಲಿ ಸರ್ಕಾರವು ಪಡಿತರ ಚೀಟಿಗಳನ್ನು ಕೊಡಲು ಸಿಂಗಲ್ ವಿಂಡೋ ಪದ್ಧತಿಯನ್ನು ಜಾರಿಗೆ ತರಲು ಕ್ರಮ ಕೈಗೊಳ್ಳುವುದೇ?

ಶ್ರೀ ಅಜೀಜ್ ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಸಿಂಗಲ್ ವಿಂಡೋ ಪದ್ಧತಿಯನ್ನು ಬೆಂಗಳೂರು ಅನೌಪಚಾರಿಕ ಪ್ರದೇಶದ ದಕ್ಷಿಣವಲಯ ಕಚೇರಿಯಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ.

ಆ) ಸದರಿ ಪದ್ಧತಿಯ ನಿರ್ವಹಣೆಯನ್ನು ಪರಿಶೀಲಿಸಿದ ನಂತರ ಇದನ್ನು ರಾಜ್ಯಾದ್ಯಂತ ಜಾರಿಗೆ ತರುವುದನ್ನು ಪರಿಶೀಲಿಸಲಾಗುವುದು.

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಸಿಂಗಲ್ ವಿಂಡೋ ಸಿಸ್ಟಂನಲ್ಲಿ ರೇಷನ್ ಕಾರ್ಡ್‌ಇಶ್ಯೂ ಮಾಡುವುದರ ಬಗ್ಗೆ ಕೇಳಿದ ನನ್ನ ಮೊದಲನೇ ಪ್ರಶ್ನೆಗೆ ಬೆಂಗಳೂರು ಸೌತ್ ರೇಂಜ್‌ನಲ್ಲಿ ಇಂಟ್ರೊಡ್ಯೂಸ್ ಮಾಡಿದ್ದೇವೆ ಎಂದೂ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಎರಡನೆಯ ಪ್ರಶ್ನೆಗೆ, ಇದರ ರಿಸಲ್ಟ್ ಏನು ಎವಾಲ್ಯುಯೇಟ್ ಮಾಡಿ, ಅವೇಲೆ ಇಡೀ ಕರ್ನಾಟಕ ರಾಜ್ಯದಲ್ಲಿ ಸಿಂಗಲ್ ವಿಂಡೋ ಸಿಸ್ಟಂನಲ್ಲಿ ರೇಷನ್ ಕಾರ್ಡ್ ಇಶ್ಯೂ ಮಾಡುವುದಕ್ಕೆ ಆಗುತ್ತದೋ ಅಥವಾ ಇಲ್ಲವೋ ಎಂಬುದನ್ನು ಪರಿಗಣಿಸಲಾಗುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ತಮಗೆ ಗೊತ್ತಿರುವ ಹಾಗೆ, ಯಾರೇ ವ್ಯಕ್ತಿ ಕೊಳಚೆ ಪ್ರದೇಶದವರಾಗಲೀ ಅಥವಾ ಅವಿದ್ಯಾವಂತರಾಗಲೀ ಒಂದು ರೇಷನ್ ಕಾರ್ಡ್ ತೆಗೆದುಕೊಳ್ಳಬೇಕಾದರೆ ಸುಮಾರು ೧೦.೧೫,೨೦ ಬಾರಿ ಡೆಪ್ಯುಟಿ ಡೈರೆಕ್ಟರ್, ಫುಡ್ ಅಂಡ್ ಸಿವಿಲ್ ಸಪ್ಲೈಸ್ ಆಫೀಸ್‌ಗೆ ಸುತ್ತಾಡಬೇಕಾಗುತ್ತದೆ. ಅವರು ಅಲ್ಲಿ ಅಪ್ಲಿಕೇಶನ್ ಕೊಟ್ಟು, ಅಫಿಡವಿಟ್ ಕೆ ಟ್ಟು ಕಾರ್ಪೊರೇಷನ್ ಎಕ್ಸ್‌ಟ್ಯಾಕ್ಟ್ ತೆಗೆದುಕೊಂಡು ಇಷ್ಟೆಲ್ಲಾ ಮಾಡಿ ಆಫೀಸಿಗೆ ಕೊಟ್ಟರೂ ಅಲ್ಲಿ ಜವಾಬ್ದಾರಿಯಿಂದ ಆನ್ಸರ್ ಮಾಡುವವರು ಯಾರೂ ಸಿಗುವುದಿಲ್ಲ ಅವರಂ ಹತ್ತಾರು ಜನರ ಹತ್ತಿರ ಹೋಗಿ ಸುತ್ತಾಡಿಕೊಂಡು ಬರುತ್ತಾರೆ. ಇವೊತ್ತು ರೇಷನ್‌ಕಾರ್ಡ್ ತೆಗೆದುಕೊಳ್ಳುವುದು ಎಷ್ಟು ಸುಲಭದ ಕೆಲಸ ಎಂದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಸಿಂಗಲ್ ವಿಂಡೋ ಸಿಸ್ಟಂ ಇಂಟ್ರೊಡ್ಯೂಸ್ ಮಾಡಿದರೆ ಒಳ್ಳೆಯದು, ಫಾಸ್ಟ್ ಎಕ್ಸ್‌ಪೀರಿಯನ್ಸ್‌ನಿಂದ ನಮಗೆ ಗೊತ್ತಾಗಿದೆ. ಯಾವುದೇ ಡಿಪಾರ್ಟ್‌ಮೆಂಟ್‌ನಲ್ಲಿ ಸಿಂಗಲ್ ವಿಂಡೋ ಸಿಸ್ಟಂನಲ್ಲಿ ಅಲ್ಲಿಯೇ ಅಪ್ಲಿಕೇಶನ್ ತೆಗೆದುಕೊಳ್ಳುವವರು ಉತ್ತರ ಕೊಡುವವರು ಒಬ್ಬರೇ ಜವಾಬ್ದಾರಿ ವ್ಯಕ್ತಿಗಳು ಇರುತ್ತಾರೆ. ಅವರಿಂದ ಉತ್ತರ ಪಡೆದುಕೊಂಡು ಮುಂದಿನ ಕೆಲಸ ಬಹಳ ಬೇಗ ಆಗುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕ ವಿಷಯ ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಸಿಂಗಲ್ ವಿಂಡೋ ಸಿಸ್ಟಂ ಬರೇ ಬೆಂಗಳೂರು ಸೌತ್ ರೇಂಜ್‌ಗೆ ಅಲ್ಲ, ಇಡೀ ಕರ್ನಾಟಕ ರಾಜ್ಯಕ್ಕೆ ಎಷ್ಟು ಬೇಗ ಮಾಡುವುದಕ್ಕೆ ಸಾಧ್ಯ ಆಗುತ್ತದೆ ಎಂದು ಕೇಳುತ್ತಿದ್ದೇನೆ.

SRI AZIZ SAIT.— Single Window system is introduced in the Office of the Dy. Director, South Range, Bangalore informal rationing area. It is in the experimental stage. Surrender certificates and deletion certificates are issued to the applicants within one hour. Change of address will be done

within 1½ hours and transfer of ration card will be done within two hours. In the case of issue of new ration card, 20 days time will be given and it will be issued on the due date. After examining the result of this system, extension to other informal rationing areas will be considered in a phased manner.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ....ಇವೆಲ್ಲಾ ಬರೇ ರೂಲ್ಸ್‌ನಲ್ಲಿದೆ. ಪ್ರಾಕ್ಟಿಕಲ್ ಆಗಿ ಅಲ್ಲಿ ಓಡಾಡುತ್ತಿರುವವರಿಗೆ ಎಷ್ಟು ಡಿಲೇ ಆಗುತ್ತದೆ ಎಂದು ಗೊತ್ತು. ಆದುದರಿಂದ ಸಿಂಗಲ್ ವಿಂಡೋ ಸಿಸ್ಟಂ ಅನ್ನು ಆದಷ್ಟು ಬೇಗ ಇಡೀ ರಾಜ್ಯದಲ್ಲಿ ಇಂಟ್ರೊಡ್ಯೂಸ್ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಆದರಲ್ಲಿ ಬೆಂಗಳೂರಿಗಾದರೂ ಬೇಗ ಮಾಡಲಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಆಜೀಜ್ ಸೇಠ್.—ತಾವು ಹೇಳುವುದರಲ್ಲಿ ಏನೂ ಅನುಮಾನ ಇಲ್ಲ. ಮಾಡುವುದಕ್ಕೆ ಸ್ವಲ ಫೈನಾನ್ಸಿಯಲ್ ಕನ್‌ಸ್ಟ್ರೇಂಟ್ಸ್ ಇರುವುದರಿಂದ ಸ್ವಲ್ಪ ಹಿಂದೆ ಮುಂದೆ ನೋಡುತ್ತಿದ್ದೇವೆ.

ಧಾರವಾಡ ಜಿಲ್ಲೆಯ ಸೆರವಾಡ ಮತ್ತು ಸವಣೂರು ರಸ್ತೆಯ ದುರಸ್ತಿ

೯೬೦. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಧಾರವಾಡ ಜಿಲ್ಲೆಯ ಶಿರವಾಡ–ಸವಣೂರ ರಸ್ತೆಯನ್ನು ದುರಸ್ತಿ ಮಾಡಲು ಸಾಕಷ್ಟು ಹಣವಿಲ್ಲವೆಂದು ಹೇಳಿ ಸರ್ಕಾರವೇ ಈ ದುರಸ್ತಿ ಕಾರ್ಯವನ್ನು ಕೈಗೊಳ್ಳಬೇಕೆಂದು ಧಾರವಾಡ ಜಿಲ್ಲಾ ಪರಿಷತ್ತು ನಿರ್ಣಯ ಮಾಡಿ ಕಳುಹಿಸಿರುವುದು ನಿಜವೇ ?

(ಆ) ಹಾಗಿದ್ದರೇ ಯಾವಾಗ ನಿರ್ಣಯವನ್ನು ಕಳುಹಿಸಿದೆ ?

(ಇ) ಸರ್ಕಾರವು ಈ ಮಾರ್ಗಗಳನ್ನು ದುರಸ್ತಿ ಮಾಡಲು ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

(ಅ) ಧಾರವಾಡ ಜಿಲ್ಲಾ ಪರಿಷತ್ತು ಈ ರೀತಿಯ ಯಾವುದೇ ನಿರ್ಣಯ ಮಾಡಿರುವುದಿಲ್ಲ. ಆದರೆ ಸದರಿ ರಸ್ತೆಯನ್ನೂ ಸೇರಿದಂತ ಹಲವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಧಾರವಾಡ ಜಿಲ್ಲಾ ಪರಿಷತ್ತು ಕಾಮಗಾರಿ ಸ್ಥಾಯಿ ಸಮಿತಿಯು ೧೧–೧೨–೧೯೮೯ ರಂದು ನಿರ್ಣಯವನ್ನು ಅಂಗೀಕರಿಸಿದೆ.

(ಆ) ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಸದರಿ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ,ಹಸ್ತಾಂತರಿಸುವ ವರೆವಿಗೂ ಜಿಲ್ಲಾ ಪರಿಷತ್ತಿನವರೇ ತಮ್ಮ ವ್ಯಾಪ್ತಿಯ ರಸ್ತೆಗಳನ್ನು ನಿರ್ವಹಣೆ ಮಾಡಬೇಕಾಗುತ್ತದೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿರುವ ಹಾಗೆ, ಜಿಲ್ಲಾ ಪರಿಷತ್ ಧಾರವಾಡದವರು ಸೆರೆವಾಡ–ಸವಣೂರು ರಸ್ತೆಯನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಳ್ಳಬೇಕು ಎಂದು ೧೧–೧೨–೧೯೮೯ ರಂದು ಕಾಮಗಾರಿ ಸ್ಥಾಯಿ ಸಮಿತಿಯವರು ರೆಸಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳಿಸಿದ್ದಾರೆ ಮಾನ್ಯ ಲೋಕೋಪಯೋಗಿ ಸಚಿವರು ತಮ್ಮ ಇಲಾಖೆಗೆ ಆ ರಸ್ತೆಯನ್ನು ತೆಗೆದುಕೊಂಡು ಶೀಘ್ರಗತಿಯಿಂದ ರಿಪೇರಿ ಮಾಡುವಂಥ ಒಂದು ವ್ಯವಸ್ಥೆ ಮಾಡಬೇಕು ಎಂದು ನಾನು ಅವರಿಗೆ ಕೇಳುತ್ತೇನೆ. ಮೊದಲು ಆ ರಸ್ತೆಯನ್ನು ಈ ಇಲಾಖೆಗೆ ತೆಗೆದುಕೊಳ್ಳಬೇಕು. ಇದರಲ್ಲಿ ದರ್ಜೆ ಪ್ರಶ್ನೆ ಇಲ್ಲ. ಅದನ್ನು ರಿಸ್ಟಿಕ್ಟ್ ರೋಡ್ ಮಾಡಲಿ ಅಥವಾ ಸ್ಟೇಟ್ ರೋಡ್ ಮಾಡಲಿ. ಒಂದು ತಿಂಗಳಲ್ಲಿ ಆಗಬೇಕು. ನಿನ್ನೆ ತಮ್ಮ ಮುಂದೆ ನಾನು ಈ ವಿಷಯವನ್ನು ತಂದಿದ್ದೆ. ಮಾನ್ಯ ಗ್ರಾಮಾಭಿವೃದ್ಧಿ ಸಚಿವರು ರೆಸಲ್ಯೂಷನ್ ಆಗಿಲ್ಲ ಎಂದು ಹೇಳಿದರು. ಈಗ ತಾವು ಮಾಡಿ ಕಳಿಸಿದ್ದಾರೆ ಎಂದು ಹೇಳುತ್ತಿದ್ದೀರಿ. ದಯವಿಟ್ಟು ತಾವು ಇದನ್ನು ಸ್ವಲ್ಪ ನೋಡಬೇಕು.

ಶ್ರೀ ಜೆ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಯಲ್ಲಿ ಈ ರಸ್ತೆ ದುರಸ್ತಿ ಕಾರ್ಯವನ್ನು ಸರ್ಕಾರವೇ ಮಾಡಬೇಕೆಂದು ಧಾರವಾಡ ಜಿಲ್ಲಾ ಪರಿಷತ್ತಿನವರು ನಿರ್ಣಯ ಮಾಡಿ ಕಳಿಸಿರುವುದು ನಿಜವೇ ಎಂದು ಇದೆ. ಆದರೆ ಇದನ್ನು ಮೇಲ್ದರ್ಜೆಗೆ ಏರಿಸಿ ನೀವು ವಹಿಸಿಕೊಳ್ಳಿ